

ಮುತ್ತಿಡುವ ನಿಲುವಂಗಿ, ಪಾರ್ಸಿ ಟೊಪ್ಪಿ, ಪಂಪ್‌ಶೂಗಳು ಅಪ್ಪುರಾಯನಿಗೆ ಏಕೋ ಈ ಅಪರಿಚಿತ ಒಳ್ಳೆಯವನೆಂದು ಕಂಡರು.

ಹೀಗೆ ದಾದರ್ ಪಾರ್ಸಿ ಕಾಲೊನಿಯಲ್ಲಿರುವ ಬೆಹರಾಮ್‌ಜೀಯವರ ಭವ್ಯ ಬಂಗಲೆ ಹೊಕ್ಕ ಅಪ್ಪುರಾಯನಿಗೆ ಬಂಗಲೆಯ ವೈಶಾಲ್ಯವೇ ದಿಙ್ಮೂಢಗೊಳಿಸಿತು. ಮಣ್ಣಿನ ಸೆರೆಬಿಟ್ಟ ಗೋಡೆ, ತೆಂಗಿನ ಸೋಗೆಗಳ ಮಾಡುಳ್ಳ ಅತ್ತೆಯ ಪುಟ್ಟ ಗುಡಿಸಲನ್ನಷ್ಟೇ ಕಂಡ ಅವನಿಗೆ ವಾಸಿಸುವ ಮನೆ ಇಷ್ಟು ಚೆನ್ನಾಗಿರಬಹುದು ಎಂದು ಊಹಿಸಲೂ ಅಸಾಧ್ಯವಾಗಿತ್ತು.

ವಿಶಾಲ ಬಂಗಲೆಯ ಸುತ್ತ ವೃಕ್ಷರಾಜಿಗಳು, ಬಂಗಲೆಯ ಎದುರು ಅಪ್ಪುರಾಯ ಕಂಡಿರದ ನಾನಾ ನಮೂನೆಯ ಹೂಗಿಡಗಳು, ಅವುಗಳಲ್ಲಿ ನಗುತ್ತಿರುವ ಹೂವುಗಳು, ಮಾವು, ಹಲಸು, ಹೆಬ್ಬಲಸು, ಸಪೋಟಾ, ಸೀತಾಫಲ, ಪೇರಳೆ ಇತ್ಯಾದಿ ಮರಗಿಡಗಳನ್ನು ತಮ್ಮ ಸ್ವಂತದ್ದೇ ಎಂದು ಭಾವಿಸಿ ಅವುಗಳ ಮೇಲೆ ದಾಳಿ ನಡೆಸಿ ಹಣ್ಣುಗಳನ್ನು ಕಬಳಿಸುವ ಪಕ್ಷಿಗಳು, ಕೋತಿಗಳು. ಬೆಹರಾಮ್‌ಜೀಯವರ ಕೆಲಸದಾಳುಗಳು ತಮ್ಮ ಒಡೆಯನ ಆಣತಿಯಂತೆ ಪ್ರಾಣಿಪಕ್ಷಿಗಳು ಯಥೇಷ್ಟ ತಿಂದ ಬಳಿಕ ಉಳಿದ ಹಣ್ಣುಗಳನ್ನು ಮಾತ್ರ ಕೀಳುತ್ತಿದ್ದರು ಹಾಗೂ ಅದನ್ನು ತಿನ್ನುವವರು ಅವರೇ ಆಗಿದ್ದರು.

ಇದಾಗಲೇ ಅರವತ್ತು ವರ್ಷ ಸಮೀಪಿಸುತ್ತಿದ್ದ ಬೆಹರಾಮ್‌ಜೀಯವರು ವಿವಾಹ ಮಾಡಿಕೊಂಡಿರಲಿಲ್ಲ. ಅವರ ತಂದೆ ಅರ್ದೇಶಿರ್ ಮಿಸ್ತ್ರಿಯವರಿಗೆ ಮುಂಬಯಿಯಲ್ಲದೇ ಪಾಲ್ಘರ್, ದಹಾನು, ತಲಾಸಾರಿ ಮುಂತಾದೆಡೆಗಳಲ್ಲಿ ಪಿತ್ರಾರ್ಜಿತ ಆಸ್ತಿ ಹೇರಳ ಪ್ರಮಾಣದಲ್ಲಿ ಇತ್ತು. ಇದರಲ್ಲಿ ಬಹುಪಾಲು ವಿವಿಧ ಪಾರ್ಸಿ ಟ್ರಸ್ಟ್, ಆಸ್ಪತ್ರೆಗಳಿಗೆ ನೀಡಿದ ಬಳಿಕವೂ ಜಮೀನು, ತೋಟಗಳು, ಫಾರ್ಮ್‌ಗಳು, ಕಟ್ಟಡಗಳು ಬೆಹರಾಮ್‌ಜೀಯವರ ಹೆಸರಿನಲ್ಲಿ ಉಳಿದುಕೊಂಡಿದ್ದವು. ಅರ್ದೇಶಿರ್ ಮಿಸ್ತ್ರಿಯವರು ತಮ್ಮ ಜೀವಿತ ಕಾಲದಲ್ಲಿ ಕೆಳ ಮಧ್ಯಮ ವರ್ಗದ ತನ್ನ ಜಾತಿಬಾಂಧವರಿಗೆ ತುಂಬ ಧನಸಹಾಯ ಮಾಡಿದ್ದಲ್ಲದೆ ಹಲವಾರು ನೌರೋಜ್, ವಿವಾಹಗಳನ್ನು ತನ್ನ ಖರ್ಚಿನಲ್ಲೇ ಮಾಡಿಸಿದ್ದರು. ಅರ್ದೇಶಿರ್‌ರವರ ಏಕೈಕ ಪುತ್ರನಾದ ಬೆಹರಾಮ್ ಜೀ ಮಿಸ್ತ್ರಿಯವರು ದಾನ, ಧರ್ಮದಲ್ಲಿ ಅಪ್ಪನನ್ನು ಮೀರಿಸಿದವರಾಗಿದ್ದರು.

1938ರಲ್ಲಿ ಜಪಾನೀಯರು ಮುಂಬಯಿಗೆ ದಾಳಿ ಮಾಡುತ್ತಾರೆಂಬ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿದಾಗ, ಭಯಭೀತರಾದ ಮುಂಬಯಿಯ ಅರ್ಧದಷ್ಟು ಜನ ತಮ್ಮ ವ್ಯವಹಾರವನ್ನು ನಿಲ್ಲಿಸಿ, ಮನೆಮಾರುಗಳನ್ನು ಸಿಕ್ಕಿದ ಬೆಲೆಗೆ ಮಾರಿ ತಮ್ಮ ಊರಿನ ದಾರಿ ಹಿಡಿದಿದ್ದರು. ಬೆಹರಾಮ್‌ಜೀಯವರು ಆ ಕಾಲಕ್ಕೆ ಹೆಚ್ಚೇ ಎನ್ನುವ ಬೆಲೆ ತೆತ್ತು ಮುಂಬಯಿ ತೊರೆಯುವವರಿಗೆ ಅವರ ಚಾಳ್, ನಿವಾಸದಿಂದ ಒಂದಿಷ್ಟು ಹಣ ದೊರೆಯುವಂತೆ ಮಾಡಿದ್ದರು. ಹೀಗೆ ಡೊಂಗ್ರಿ, ಬೈಖಲಾ, ಚೆಂಬೂರು, ತಾಡದೇವ್, ಪೈಧೋನಿ, ವರಳಿ ಮುಂತಾದ ಮುಂಬಯಿಯ ಹೃದಯ ಭಾಗದ ಪ್ರದೇಶಗಳಲ್ಲಿರುವ ಫ್ಲ್ಯಾಟ್, ಚಾಳ್‌ಗಳನ್ನು ಖರೀದಿಸಿದ ಬೆಹರಾಮ್‌ಜೀಯವರು ಪರಿಸ್ಥಿತಿ ಸುಧಾರಿಸಿದ ಬಳಿಕ ವಾಪಸು ಬಂದ ನಿವಾಸಗಳ ಒಡೆಯರಿಗೆ ಅವರವರ ಚಾಳನ್ನೋ, ಬಂಗಲೆಯನ್ನೋ, ಫ್ಲ್ಯಾಟನ್ನೋ ಉಚಿತವಾಗಿ ಹಸ್ತಾಂತರಿಸಿದರು. ಆದರೂ ಅಸಂಖ್ಯ ಚಾಳ್‌ಗಳು, ಸಣ್ಣಪುಟ್ಟ ಬಂಗಲೆಗಳು, ಸೌಧಗಳು ಇವರ ಹೆಸರಿನಲ್ಲಿಯೇ ಉಳಿದುಕೊಂಡವು.

ಅಪ್ಪುರಾಯ ಕಾಮತ್ ಬೆಹರಾಮ್‌ಜೀಯವರಿಗೆ ಪ್ಯಾರಾ ಡಿಕ್ರಾ (ಮುದ್ದಿನ ಹುಡುಗ) ಆಗಿಬಿಟ್ಟ. ಮೊದಮೊದಲು ಪಾರಸಿಯವರಂತೆಯೆ ಉಡುಗೆ ತೊಡುತ್ತಿದ್ದ ಅವನಿಗೆ, ಬೆಹರಾಮ್‌ಜೀಯವರೇ ಖಾದಿ ಧೋತರದ ಕಚ್ಚೆ, ಕಂದುಬಣ್ಣದ ಅರೆತೋಳಿನ ಖಾದಿ ಅಂಗಿಯನ್ನು ತೊಡುವಂತೆ ಆದೇಶಿಸಿದ್ದಲ್ಲದೆ, ಅವನ ಪೂಜೆ–ಪ್ರಾರ್ಥನೆಗಾಗಿ ಶಿವ ಹಾಗೂ ಆಂಜನೇಯನ ಫೋಟೊವನ್ನು ಅವನ ಕೋಣೆಯಲ್ಲಿರಿಸಿ, ದಿನನಿತ್ಯ ಎರಡು ಬಾರಿ ಆತ ಪ್ರಾರ್ಥಿಸುವಂತೆ ಸೂಚಿಸಿದರು.